# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 119/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ನವ್ಯಶ್ರೀ | | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| **ತಂದೆ/ಗಂಡನ ಹೆಸರು** | ಃ ಶ್ರೀ ರವಿ | | **29.07.2024** |
| **ವಯಸ್ಸು** | ಃ **30** ವರ್ಷ | | |
| **ವೃತ್ತಿ** | ಃ ಗೃಹಿಣಿ | | **ಪ್ರಾ.ಸಾ. ಃ 21** |
| **ವಾಸಸ್ಥಳ** | ಃ ಕೆ.ಜಿ.ಕೊಪ್ಪಲ್ | | **ಚಾ.ಸಾ. ಃ 08** |

**<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>**

. ಚಾ.ಸಾ-*7* ನನ್ನ ತಾಯಿ ಇರುತ್ತಾರೆ. ಕೋರ್ಟ್ ಮುಂದೆ ಆರೋಪಿತ ನನ್ನ ಅಣ್ಣನಿರುತ್ತಾರೆ. ಮೃತ ಶಿವಪ್ರಕಾಶ್ ನನ್ನ ತಂದೆಯಿರುತ್ತಾರೆ. ನನ್ನ ತಂದೆ ಸೀಮೆಎಣ್ಣೆ ವ್ಯಾಪಾರ, ಟೂರ್ಸ್ ಅಂಡ್ ಟ್ರಾವೆಲ್ಸ್ ವ್ಯವಹಾರ ಮಾಡಿಕೊಂಡಿದ್ದರು. ನನ್ನ ತಂದೆ ಡ್ರೈವರ್ ಗಳನ್ನು ಇಟ್ಟುಕೊಂಡಿದ್ದರು ಆದರೆ ಅವರ ಹೆಸರು ಗೊತ್ತಿಲ್ಲ. ನನ್ನ ತಂದೆ ನಾಗರಾಜು ಎನುವವರು ಡ್ರೈವರ್ ಕೆಲಸ ಮಾಡಿಕೊಂಡಿದ್ದ ಬಗ್ಗೆ ಗೊತ್ತಿಲ್ಲ. ನನ್ನ ತಂದೆ ನನ್ನನ್ನು, ನನ್ನ ತಾಯಿಯನ್ನು ಮತ್ತು ನನ್ನ ಅಣ್ಣನನ್ನು ಚೆನ್ನಾಗಿ ನೋಡಿಕೊಳ್ಳುತಿದ್ದರು. ನನ್ನ ತಂದೆಗೆ ಸೇರಿದ ಸೈಟು ಮೈಸೂರು ದಡದಹಳ್ಳಿ ರೈಲ್ವೆ ಗೇಟ್ ಬಳಿ ಇದ್ದ ಬಗ್ಗೆ ಗೊತ್ತಿಲ್ಲ. ನನ್ನ ತಂದೆ ಬೇರೆ ವ್ಯಕ್ತಿಗಳನ್ನು ನೋಡಿಕೊಳ್ಳುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಅಂದರೆ ಆರೋಪಿ ನನ್ನ ತಂದೆಯ ಜೊತೆ ಅವರ ವ್ಯವಹಾರ ಮಾಡುತ್ತಿದ್ದ. ಆರೋಪಿತ ಹಣಕಾಸಿನಲ್ಲಿ ಚೆನ್ನಾಗಿ ಇದ್ದ. ನಾನು ರವಿ

ಎನ್ನುವವರನ್ನು ಮದುವೆಯಾಗಿದ್ದೇನೆ. ದಿಃ*21.10.2021* ರಂದು ನಾನು ಕೆ.ಜಿ.ಕೊಪ್ಪಲಿನ ನನ್ನ ತಂದೆ ಮನೆಯಲ್ಲಿದ್ದಾಗ ನನ್ನ ತಾಯಿಯ ಫೋನ್ ನಂಬರ್ ಗೆ ಪೋಲಿಸರು ಕರೆ ಮಾಡಿ ನನ್ನ ತಂದೆ ಮರಣಹೊಂದಿದ್ದ ಬಗ್ಗೆ ತಿಳಿಸಿದ್ದರು. ಆದರೆ ಆ ದಿನ ಆರೋಪಿತ ನನಗೆ ಫೋನ್ ಮಾಡಿ ನನ್ನ ತಂದೆಯ ಮರಣದ ಬಗ್ಗೆ ತಿಳಿಸಿರಲಿಲ್ಲ. ನನ್ನ ಗಂಡ ರವಿ ಸಹ ಆರೋಪಿತನಿಗೆ ಫೋನ್ ಮಾಡಿ ವಿಷಯ ತಿಳಿದುಕೊಂಡಿಲ್ಲ. *9742222922* ಸಂಖ್ಯೆಯ ಫೊನ್ ಯಾರದ್ದು ಎಂದು ಗೊತ್ತಿಲ್ಲ. ನನ್ನ ತಂದೆಯ ಕೊಲೆಯನ್ನು ಯಾರು ಮಾಡಿದ್ದರು ಮತ್ತು ನನ್ನ ತಂದೆಯ ಜೊತೆ ಬೇರೆ ಯಾರ ಕೊಲೆಯಾಗಿತ್ತು ಎಂದು ಗೊತ್ತಿಲ್ಲ. ನನ್ನ ತಂದೆಯ ಕೊಲೆಯನ್ನು ಯಾರು ಮಾಡಿದ್ದರು ಎಂದು ನಾನು ವಿಚಾರಿಸಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ನನ್ನ ತಂದೆ ಟೂರ್ಸ್ ಅಂಡ್ ಟ್ರಾವೆಲ್ಸ್ ನಲ್ಲಿ ಕೆಲಸ ಮಾಡುತ್ತಿದ್ದ ನಾಗರಾಜು ಎನ್ನುವ ಡ್ರೈವರ್ *15* ವರ್ಷಗಳ ಹಿಂದೆ ಮರಣಹೊಂದಿದ್ದರು ಆ ನಾಗರಾಜು ಇವರ ಹೆಂಡತಿ ಮಕ್ಕಳ ಜವಬ್ದಾರಿಯನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯೇ ನಾಗರಾಜು ಇವರ ಮೂರು ಜನ ಮಕ್ಕಳ ವಿದ್ಯಾಭ್ಯಾಸ ಮಾಡಿಸಿದ್ದರು ಮತ್ತು ಅವರ ಮೊದಲ ಮಗಳು ರಶ್ಮಿಯ ಮದುವೆಯನ್ನು ಸಹ ಜವಬ್ದಾರಿ ವಹಿಸಿಕೊಂಡು ಮಾಡಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನಾಗರಾಜು ಇವರ ಹೆಂಡತಿ ಲತಾ ಇವರ ಮನೆಗೆ ಆಗಾಗ ಹೋಗುತ್ತಿದ್ದರು ಮತ್ತು ಹೆಚ್ಚಿಗೆ ಅವರ ಮನೆಯಲ್ಲೇ ಇರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನನ್ನನ್ನು ಮತ್ತು

ನನ್ನ ತಾಯಿ, ಮತ್ತು ಅಣ್ಣನನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದ ಕಾರಣ ನನ್ನ ತಾಯಿ ಅವರೊಂದಿಗೆ ಆಗಾಗ ಜಗಳ ಮಾಡುತ್ತಿದ್ದರು ಮತ್ತು ನನ್ನ ತಂದೆ ತಮ್ಮ ಮಹೇಶ ಮತ್ತು ನನ್ನ ತಂದೆಯ ಕೆಲ ಸ್ನೇಹಿತರು ಬಂದು ಸಮಾಧಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ರವಿ ಎನ್ನುವ ಹುಡುಗನನ್ನು ಪ್ರೀತಿ ಮದುವೆಯಾದಾಗ ನನ್ನ ತಂದೆ ಬೇಸರ ಪಟ್ಟುಕೊಂಡಿದ್ದರು ಮತ್ತು ನನಗೆ ಒಂದು ಮಗು ಹುಟ್ಟಿದ ಬಳಿಕ ನಾವಿಬ್ಬರು ಚೆನ್ನಾಗಿದ್ದೆವು ಎಂದರೆ ಸರಿಯಲ್ಲ. *2020* ರ ನವೆಂಬರ್ ತಿಂಗಳಲ್ಲಿ ನನ್ನ ತಂದೆ ಮೈಸೂರು ದಡದಹಳ್ಳಿ ರಸ್ತೆಯಲ್ಲಿ ರೈಲ್ವೆ ಗೇಟ್ ಬಳಿ ಇದ್ದ ಒಂದು ಸೈಟ್ ಅನ್ನು ನಾಗರಾಜು ಇವರ ಹೆಂಡತಿ ಲತಾ ಇವರ ಹೆಸರಿಗೆ ನೊಂದಣಿ ಮಾಡಿಸಿಕೊಟ್ಟು ಸ್ವತಃ ಅವರೇ ನಿಂತು ಮನೆ ಕಟ್ಟಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸಂಪಾದನೆ ಹಣವನ್ನೆಲ್ಲಾ ಲತಾ ಇವರ ಮನೆಯವರಿಗೆ ಖರ್ಚು ಮಾಡುತ್ತಾರೆ ಎನ್ನುವ ವಿಚಾರಕ್ಕೆ ನನ್ನ ಅಣ್ಣ ಮತ್ತು ನನ್ನ ತಾಯಿ ನನ್ನ ತಂದೆಗೆ ಇನ್ನು ಮುಂದೆ ಲತಾ ಇವರ ಮನೆಗೆ ಹೋಗಬೇಡಿ ಮತ್ತು ಅವರ ಮನೆಯವರಿಗೆ ಸಹಾಯ ಮಾಡಬೇಡಿ ಎಂದು ಹೇಳಿದಾಗ ಅವರು ನಿಮ್ಮನ್ನು ಬಿಟ್ಟರೂ ಲತಾ ಮತ್ತು ಅವರ ಮನೆಯವರನ್ನು ಬಿಡುವುದಿಲ್ಲ ಎಂದು ಹೇಳಿದ್ದರು ಮತ್ತು ಆ ವಿಚಾರಕ್ಕೆ ನಮಗೆ ಅಸಮಾಧಾನ ಇತ್ತು ಎಂದರೆ ಸರಿಯಲ್ಲ.

*3.* ದಿಃ*21.10.2021* ರಂದು ನಾನು ನನ್ನ ಚಿಕ್ಕಮ್ಮನ ಮನೆಯಲ್ಲಿ ಬೋಗಾದಿಯಲ್ಲಿ ಇದ್ದಾಗ ನನ್ನ ತಾಯಿಗೆ ಹಲ್ಲು ನೋವು ಬಂದಿದ್ದರಿಂದ ನನ್ನ ಅಣ್ಣನಿಗೆ ಆಸ್ಪತ್ರೆಗೆ ಕರೆದುಕೊಂಡು ಇಲ್ಲವಾದರೆ ನಾನೇ ನಿಮ್ಮ ತಂದೆಯ ಬಳಿ ಹಣ ಕೇಳುತ್ತೇನೆ ಎಂದು ಹೇಳಿದಾಗ ನನ್ನ ಅಣ್ಣ ಸಾಗರ್ ನು ನೀನು ಕೇಳಬೇಡ ನಾನೇ ಅವರ ಜೊತೆ ಮಾತನಾಡಿ ಆಸ್ಪತ್ರೆಗೆ ಕರೆದುಕೊಂಡು ಹೊಗುತ್ತೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ *11* ಗಂಟೆಗೆ ನನ್ನ ಮೊಬೈಲ್ ಗೆ ಫೋನ್

ಮಾಡಿದಾಗ ಲತಾ ಮತ್ತು ನನ್ನ ತಂದೆ ಕೊಲೆಯಾಗಿದ್ದ ಬಗ್ಗೆ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದಾಗ ಆರೋಪಿತ ನನಗೂ ಅವರಿಗೂ ಗಲಾಟೆಯಾಗಿ ಏನೋ ಆಯಿತು ಎಂದು ಫೊನ್ ಕಟ್ ಮಾಡಿದ್ದ ಎಂದರೆ ಸರಿಯಲ್ಲ. ನಂತರ ನಾನು ನನ್ನ ಗಂಡ ರವಿಗೆ ಪೋನ್ ಮಾಡಿ ವಿಷಯ ತಿಳಿದುಕೊಳ್ಳಲು ಹೇಳಿದಾಗ ಅದೇ ದಿನ ರಾತ್ರಿ ನನ್ನ ತಂದೆ ಲತಾ ಇವರ ಮನೆಯಲ್ಲಿದ್ದಾಗ ರಾತ್ರಿ ***9.30***ಕ್ಕೆ ಮನೆಯಿಂದ ಹೊರಗೆ ಬಂದಾಗ ನನ್ನ ಅಣ್ಣ ಸಾಗರ್ ನು ಅವರೊಂದಿಗೆ ಜಗಳ ತೆಗೆದು ಮಚ್ಚಿನಿಂದ ನನ್ನ ತಂದೆಯನ್ನು ಮತ್ತು ತಡೆಯಲು ಬಂದ ಲತಾ ಇವರನ್ನು ಮಚ್ಚಿನಿಂದ ಕೊಲೆ ಮಾಡಿ ನಾಗಾರ್ಜುನನಿಗೆ ಗಾಯಗೊಳಿಸಿದ್ದಾಗಿ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನಂತರ ನಾನು ಪುನಃ ಆರೋಪಿತನಿಗೆ ಕರೆ ಮಾಡಿದಾಗ ಆರೋಪಿತ ನನ್ನ ತಂದೆ ಮತುತ ಲತಾ ಇವರನ್ನು ಕೊಲೆ ಮಾಡಿದ ಬಗ್ಗೆ ಮತ್ತು ನಾಗಾರ್ಜುನನಿಗೆ ಹೊಡೆದು ಗಾಯಗೊಳಿಸಿದ್ದ ಬಗ್ಗೆ ಹೇಳಿ ಪೋನ್ ಕಟ್ ಮಾಡಿದ್ದ ಎಂದರೆ ಸರಿಯಲ್ಲ. ಆ ದಿನ ರಾತ್ರಿ ನಾನು ಲತಾ ಇವರ ಮನೆ ಬಳಿ ಹೋಗಿರಲಿಲ್ಲ ಎಂದರೆ ನಿಜ. ನನ್ನ ತಂದೆ ಲತಾ ಮತ್ತು ಅವರ ಮನೆಯವರಿಗೆ ಸಹಾಯ ಮಾಡಿದ್ದರಿಂದ ನನ್ನ ಅಣ್ಣ ಕೋಪದಿಂದ ಹಲ್ಲೆ ಮಾಡಿ ನನ್ನ ತಂದೆ ಮತ್ತು ಲತಾ ಇವರನ್ನು ಕೊಲೆ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಈಗ ಸುಮಾರು -------- ಮಾಡಿರುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-***51*** ಎಂದು ಗುರುತಿಸಿದೆ. ಆರೋಪಿ ನನ್ನ ಅಣ್ಣ ಎನ್ನುವ ಕಾರಣಕ್ಕೆ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ಸಿ.ಪಿ ವಕೀಲರವರಿಂದಃ-

*4.* ನನ್ನ ಅಣ್ಣನ ಫೊನ್ ನಂಬರ್***9886268281*** ಇರುತ್ತದೆ.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*